ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ವಿಭಾಗ
ಜಿ.ಕೆ.ವಿ.ಕೆ., ಬೆಂಗಳೂರು-560065

* ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

ದಿನಾಂಕ: 16.10.2015

ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೀಮಿತವಾಗಿದೆ.

ಈ ವಾರದ ಮುನ್ಸೂಚನೆ (ದಿನಾಂಕ 17.10.15 –21.10.15 ವರೆಗೆ)

ನಿಯತಾಂಕಗಳು	17.10.15	18.10.15	19.10.15	20.10.15	21.10.15
ಮಳೆ (ಮಿ ಮಿ)	0	0	1	1	2
ಗರಿಷ್ಠ ಉಷ್ಣಾಂಶ(ಡಿ.ಸೆ.)	32	31	31	32	31
ಕನಿಷ್ಠ ಉಷ್ಣಾಂಶ (ಡಿ.ಸೆ.)	19	19	19	19	19
ಮೋಡ (ಪ್ರಮಾಣ)	2	2	3	3	2
ಆರ್ದ್ರತೆ ೭.೨೦ ಬೆ (ಶೇ)	74	72	73	78	79
ಆರ್ದ್ರತೆ ೨.೨೦ ಮ (ಶೇ)	47	48	50	54	50
ಗಾಳಿಯ ವೇಗ (ಕಿ.ಮಿ/ಗಂಟೆಗೆ)	2	4	2	2	4
ಗಾಳಿಯ ದಿಕ್ಕು (ಡಿಗ್ರಿ)	20	10	10	20	90

ಮುಂದಿನ ದಿನಗಳಲ್ಲಿ ಹಗುರ ಮಳೆಯಾಗುವ ಸಂಭವವಿದೆ. ದಿನದ ಗರಿಷ್ಠ ಉಷ್ಣಾಂಶ **31.0-32.0°C** ಮತ್ತು ಕನಿಷ್ಠ **19.0°C** ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **72-79 %** ಇದ್ದು ಮಧ್ಯಾಹ್ನ **47-54 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **2-4** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಉತ್ತಮ ಮಳೆಯಾಗಿರುವುದರಿಂದ ಮುಂಗಾರು ಬೆಳೆಗಳಿಗೆ ಅಂತರ ಬೇಸಾಯ ಮಾಡಲು ಸೂಚಿಸಲಾಗಿದೆ.

- **ಶೇಂಗಾ ಬೆಳೆ:** ಮೋಡಕವಿದ ವಾತಾವರಣ ವಿರುವುದರಿಂದ ಎಲೆಚುಕ್ಕೆ ರೋಗ ಬರುವ ಸಾಧ್ಯತೆಯಿದೆ. ಇದರ ಹತೋಟಿಗೆ 1.0 ಮಿ.ಲಿ ಕಾರ್ಬೆಂಡಜಿಮ್ ಪ್ರತಿ ಲೀಟರ್ ನೀರಿನಲ್ಲಿ ಬೆರಸಿ ಸಿಂಪಡಿಸಿ. ಸುರಳಿ ಪೂಚಿ ಕೀಟದ ಹತೋಟಿಗೆ 2.0 ಮಿ.ಲಿ ಕ್ವಿನಾಲ್‌ಫಾಸ್ ಪ್ರತಿ ಲೀಟರ್ ನೀರಿನಲ್ಲಿ ಬೆರಸಿ ಸಿಂಪಡಿಸಿ.

- ತೊಗರಿ ಬೆಳೆಯಲ್ಲಿ ತಪ್ಪದೇ ಪ್ರತಿ ಸಾಲಿನಲ್ಲಿ ಕಳೆ ನಿಯಂತ್ರಿಸಿ, ಮಣ್ಣು ಬುಡಗಳಿಗೆ ಏರಿಸುವುದು. ಬೆಳೆಗಳಿಗೆ ಕೀಟ ಹಾಗೂ ರೋಗಗಳು ಕಂಡುಬಂದಲ್ಲಿ ಔಷಧಿ ಸಿಂಪರಣೆಯನ್ನು ಮಳೆ ಇಲ್ಲದಿರುವಾಗ ಕೈಗೊಳ್ಳುವುದು ಸೂಕ್ತ (ಅವಶ್ಯಕತೆಯಿದ್ದಲ್ಲಿ ಮಾತ್ರ) . ಸೊರಗು ರೋಗದ ಹತೋಟಿಗೆ ಕಾರ್ಬೆನ್‌ಡೈಜಿಮ್@ 2 ಮಿ.ಲೀ ನೀರಿನಲ್ಲಿ ಬೆರೆಸಿ ಸಿಂಪಡಿಸಿ.

- ಅಲ್ಪಾವಧಿ ಬೆಳೆಗಳಾದ ಹುರುಳಿ, ಅಲಸಂದೆ, ಸಜ್ಜೆ, ಉದ್ದು, ನವಣೆ, ಸಾಮೆ, ಹೆಸರು ಬಿತ್ತನೆ ಮಾಡಲು ಸೂಚಿಸಲಾಗಿದೆ. ಮುಂಗಾರು ಬತ್ತ ಕಟಾವು ಆಗಿರುವ ಕಡೆಗಳಲ್ಲಿ ಅಲ್ಪಾವಧಿ ಬೆಳೆಯಾದ ಕಡಲೆಕಾಳು ಬಿತ್ತನೆ ಮಾಡಲು ಸೂಕ್ತ ಕಾಲ.

- ತೋಟಗಾರಿಕೆ ಬೆಳೆಗಳಾದ ಮಾವು, ಸಪೋಟ, ತೆಂಗು ಹಾಗು ಬಾಳೆ ಮುಂದಿನ ಐದು ದಿನ ನೀರವಾರಿಯನ್ನು ತಡೆ ಹಿಡಿಯುವುದು.

- ಬೆಳಗ್ಗೆ ಹಾಗು ಸಂಜೆವೇಳೆ ವಾತವರಣದ ಉಷ್ಣಾಂಶದಲ್ಲಿ ಸ್ವಲ್ಪ ಏರಿಳಿತವಿರುವುದರಿಂದ ಹಾಗು ತೇವಾಂಶದ ಪ್ರಮಾಣ ಹೆಚ್ಚಾಗಿರುವುದರಿಂದ ರೇಷ್ಮೆ ಮತ್ತು ಕೋಳಿಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು.

ನೋಡಲ್ ಅಧಿಕಾರಿ:
ಕೃ.ವಿ.ವಿ, ಜಿ.ಕೆ.ವಿ.ಕೆ
ಬೆಂಗಳೂರು